Re. No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

( EXTRAORDINARY )

( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं–1 नई दिल्ली, सोमवार, मे 5 -1997 | वैशाख 15, 1919 (शक) | खन्ड–16 |
| No. 1 New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |

## Ministry of Law, Justice & Company Affairs

(Legislative Department)

New Delhi, December 25, 1995

## ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987

## (1987ರ ಅಧಿನಿಯಮ ಸಂಖ್ಯೆ 52)

[23ನೇ ಡಿಸೆಂಬರ್, 1987.]

ದೇಶದಾದ್ಯಂತ ತಾಂತ್ರಿಕ ಶಿಕ್ಷಣ ಪದ್ಧತಿಯ ಸಮರ್ಪಕ ಯೋಜನೆ ಮತ್ತು ಸಮನ್ವಯಿತ ಅಭಿವೃದ್ಧಿ, ಯೋಜಿತ ಪರಿಮಾಣಾತ್ಮಕ ಬೆಳವಣಿಗೆಯ ಸಂಬಂಧದಲ್ಲಿ ಅಂಥ ಶಿಕ್ಷಣದ ಗುಣಾತ್ಮಕ ಸುಧಾರಣೆಯ ಸಂವರ್ಧನೆ ಮತ್ತು ತಾಂತ್ರಿಕ ಶಿಕ್ಷಣದ ಪದ್ಧತಿಯಲ್ಲಿ ಮಟ್ಟಗಳು ಮತ್ತು ಮಾನಕಗಳ ನಿಯಂತ್ರಣ ಮತ್ತು ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತನ್ನು ಸ್ಥಾಪಿಸಲು ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956 (1956ರ 3) ರ ಪ್ರಕರಣ 4ರ ಮೇರೆಗೆ ಸ್ಥಾಪಿಸಿದ ವಿಶ್ವವಿದ್ಯಾಲಯ ಅನುದಾನಗಳ ಆಯೋಗ;

(ಬಿ) "ಪರಿಷತ್ತು" ಎಂದರೆ, ಪ್ರಕರಣ 3ರ ಮೇರೆಗೆ ಸ್ಥಾಪಿಸಿದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು;

(ಸಿ) "ನಿಧಿ" ಎಂದರೆ, ಪ್ರಕರಣ 16ರ ಮೇರೆಗೆ ರಚಿಸಿದ ಪರಿಷತ್ತಿನ ನಿಧಿ;

---

* ಮಾರ್ಚ್ 28, 1988, ಅಧಿಸೂಚನೆ ಸಂಖ್ಯೆ ಎಸ್.ಓ 317 (ಇ), ದಿನಾಂಕ:28ನೇ ಮಾರ್ಚ್, 1988, ಭಾರತ ವಿಶೇಷ ರಾಜಪತ್ರ, ಭಾಗ , ವಿಭಾಗ 3()ನ್ನು ನೋಡಿ.

(ಡಿ) "ಸದಸ್ಯ" ಎಂದರೆ, ಪರಿಷತ್ತಿನ ಸದಸ್ಯ ಮತ್ತು ಅದು ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಇ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ವಿನಿಯಮನಗಳು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮನಗಳು;

(ಜಿ) "ತಾಂತ್ರಿಕ ಶಿಕ್ಷಣ" ಎಂದರೆ, ಶಿಕ್ಷಣ ಕಾರ್ಯಕ್ರಮಗಳು, ಇಂಜಿನಿಯರಿಂಗ್ ತಂತ್ರಜ್ಞಾನ ವಾಸ್ತುಶಿಲ್ಪ, ನಗರ ಯೋಜನೆ, ವ್ಯವಸ್ಥಾಪನೆ, ಔಷಧ ವಿಜ್ಞಾನ ಮತ್ತು ಅನ್ವಯಿಕ ಕಲೆಗಳು ಮತ್ತು ವೃತ್ತಿಗಳಲ್ಲಿ ಮತ್ತು ಕೇಂದ್ರ ಸರ್ಕಾರವು ಪರಿಷತ್ತಿನೊಂದಿಗೆ ಸಮಾಲೋಚಿಸಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಬಹುದಾದಂಥ ಇತರ ಕಾರ್ಯಕ್ರಮಗಳು ಅಥವಾ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ತರಬೇತಿ;

(ಹೆಚ್) "ತಾಂತ್ರಿಕ ಸಂಸ್ಥೆ" ಎಂದರೆ, ತಾಂತ್ರಿಕ ಶಿಕ್ಷಣದ ವ್ಯಾಸಂಗ ಕ್ರಮಗಳು ಅಥವಾ ಕಾರ್ಯಕ್ರಮಗಳನ್ನು ನೀಡುವ ವಿಶ್ವವಿದ್ಯಾಲಯವಲ್ಲದ ಸಂಸ್ಥೆ ಮತ್ತು ಅದು ಕೇಂದ್ರ ಸರ್ಕಾರವು, ಪರಿಷತ್ತಿನೊಂದಿಗೆ ಸಮಾಲೋಚಿಸಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾಂತ್ರಿಕ ಸಂಸ್ಥೆ ಎಂದು ಘೋಷಿಸಬಹುದಾದಂಥ ಇತರ ಸಂಸ್ಥೆಗಳನ್ನು ಒಳಗೊಳ್ಳತಕ್ಕದ್ದು;

(ಐ) "ವಿಶ್ವವಿದ್ಯಾಲಯ" ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956 (1956ರ 3) ರ ಪ್ರಕರಣ 2ರ ಖಂಡ (ಎಫ್)ನ ಮೇರೆಗೆ ಪರಿಭಾಷಿಸಿರುವ ವಿಶ್ವವಿದ್ಯಾಲಯ ಮತ್ತು ಆ ಅಧಿನಿಯಮದ ಪ್ರಕರಣ 3ರ ಮೇರೆಗೆ ವಿಶ್ವವಿದ್ಯಾಲಯವೆಂದು ಭಾವಿಸಬೇಕಾದ ಸಂಸ್ಥೆಯನ್ನು ಒಳಗೊಳ್ಳುತ್ತದೆ.

## ಅಧ್ಯಾಯ II

## ಪರಿಷತ್ತಿನ ಸ್ಥಾಪನೆ

**3. ಪರಿಷತ್ತಿನ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಎಂಬ ಹೆಸರಿನ ಒಂದು ಪರಿಷತ್ತನ್ನು ಸ್ಥಾಪಿಸತಕ್ಕದ್ದು.

(2) ಪರಿಷತ್ತು, ನಿರಂತರ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಕರಾರನ್ನು ಮಾಡಿಕೊಳ್ಳುವ ಅಧಿಕಾರದೊಂದಿಗೆ ಮೇಲೆ ಹೇಳಿದ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ಹೂಡಲ್ಪಡತಕ್ಕದ್ದು.

(3) ಪರಿಷತ್ತಿನ ಮುಖ್ಯ ಕಚೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಪರಿಷತ್ತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಭಾರತದ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

(4) ಪರಿಷತ್ತು ಈ ಕೆಳಕಂಡ ಸದಸ್ಯರನ್ನೊಳಗೊಂಡಿರತಕ್ಕದ್ದು, ಎಂದರೆ:–

(ಎ) ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಅಧ್ಯಕ್ಷ;

(ಬಿ) ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಉಪಾಧ್ಯಕ್ಷ;

(ಸಿ) ಶಿಕ್ಷಣ ವ್ಯವಹಾರವನ್ನು ನಡೆಸುವ ಕೇಂದ್ರ ಸರ್ಕಾರದ ಮಂತ್ರಾಲಯದ ಭಾರತ ಸರ್ಕಾರದ ಕಾರ್ಯದರ್ಶಿ, ಪದನಿಮಿತ್ತ;

(ಡಿ) ಭಾರತ ಸರ್ಕಾರದ ಮಹಾ ಶಿಕ್ಷಣ ಸಲಹೆಗಾರ (ಜನರಲ್), ಪದನಿಮಿತ್ತ;

(ಇ) ನಾಲ್ಕು ಪ್ರಾದೇಶಿಕ ಸಮಿತಿಗಳ ಅಧ್ಯಕ್ಷರು, ಪದನಿಮಿತ್ತ;

(ಎಫ್) ಈ ಕೆಳಕಂಡ ಮಂಡಳಿಗಳ ಅಧ್ಯಕ್ಷರು, ಎಂದರೆ:–

(i) ಅಖಿಲ ಭಾರತ ವೃತ್ತಿಪರ ಶಿಕ್ಷಣ ಮಂಡಳಿ, ಪದನಿಮಿತ್ತ;

(ii) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಪದನಿಮಿತ್ತ;

(iii) ಅಖಿಲ ಭಾರತ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸ್ನಾತಕಪೂರ್ವ ಅಧ್ಯಯನಗಳ ಮಂಡಳಿ, ಪದನಿಮಿತ್ತ;

(iv) ಅಖಿಲ ಭಾರತ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ಮಂಡಳಿ, ಪದನಿಮಿತ್ತ;

(v) ಅಖಿಲ ಭಾರತ ವ್ಯವಸ್ಥಾಪನಾ ಅಧ್ಯಯನ ಮಂಡಳಿ, ಪದನಿಮಿತ್ತ;

(ಜಿ) ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಒಬ್ಬ ಸದಸ್ಯ;

(ಹೆಚ್) ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಒಬ್ಬ ಸದಸ್ಯ;

(ಐ) ಖಂಡ (ಜಿ) ಮತ್ತು (ಹೆಚ್) ನಲ್ಲಿ ನಿರ್ದಿಷ್ಟಪಡಿಸಿರುವವುಗಳನ್ನುಳಿದು ಕೇಂದ್ರ ಸರ್ಕಾರದ ಮಂತ್ರಾಲಯಗಳು ಮತ್ತು ಇಲಾಖೆಗಳನ್ನು ಪ್ರತಿನಿಧಿಸಲು ಸರದಿಯ ಮೇರೆಗೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ನಾಲ್ವರು ಸದಸ್ಯರು;

(ಜೆ) ಸಂಸತ್ತಿನ ಇಬ್ಬರು ಸದಸ್ಯರು, ಅವರಲ್ಲಿ ಒಬ್ಬರು ಲೋಕಸಭೆಯಿಂದ ಮತ್ತೊಬ್ಬರು ರಾಜ್ಯಸಭೆಯಿಂದ ಚುನಾಯಿತರಾಗತಕ್ಕದ್ದು;

(ಕೆ) ರಾಜ್ಯಗಳು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳನ್ನು ಪ್ರತಿನಿಧಿಸಲು ಅಕ್ಷರಾನುಕ್ರಮದಲ್ಲಿ ಸರದಿಯ ಮೇರೆಗೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಎಂಟು ಸದಸ್ಯರು:

ಪರಂತು, ಈ ಖಂಡದ ಮೇರೆಗಿನ ನೇಮಕವನ್ನು ಸಂದರ್ಭಾನುಸಾರ ಸಂಬಂಧಪಟ್ಟ ರಾಜ್ಯ ಸರ್ಕಾರ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಶಿಫಾರಸ್ಸಿನ ಮೇಲೆ ಮಾಡತಕ್ಕದ್ದು;

(ಎಲ್) ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿನ ಸಂಸ್ಥೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ನಾಲ್ವರು ಸದಸ್ಯರು;

(ಎಂ) ಈ ಮುಂದಿನ ಸಂಸ್ಥೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಏಳು ಜನ ಸದಸ್ಯರು ಎಂದರೆ:–

(i) ಕೇಂದ್ರ ಶಿಕ್ಷಣ ಸಲಹಾ ಮಂಡಳಿ;

(ii) ಭಾರತ ವಿಶ್ವವಿದ್ಯಾಲಯಗಳ ಸಂಘ;

(iii) ಭಾರತ ತಾಂತ್ರಿಕ ಶಿಕ್ಷಣ ಸಂಘ;

(iv) ಭಾರತ ತಂತ್ರಜ್ಞಾನ ಶಿಕ್ಷಣ ಸಂಸ್ಥೆಗಳ ಪರಿಷತ್ತು;

(v) ಭಾರತ ಔಷಧ ವಿಜ್ಞಾನ ಪರಿಷತ್ತು;

(vi) ವಾಸ್ತುಶಿಲ್ಪ ಪರಿಷತ್ತು;

(vii) ರಾಷ್ಟ್ರೀಯ ಉತ್ಪಾದನಾ ಪರಿಷತ್ತು;

(ಎನ್) ತಾಂತ್ರಿಕ ಮತ್ತು ವ್ಯವಸ್ಥಾಪನಾ ಶಿಕ್ಷಣ ಕ್ಷೇತ್ರದಲ್ಲಿನ ವೃತ್ತಿ ನಿಕಾಯಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ನಾಲ್ವರು ಸದಸ್ಯರು;

(ಓ) ಮೇಲೆ ಹೇಳಿದ ಖಂಡಗಳಲ್ಲಿ ಒಳಗೊಳ್ಳದಂಥ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂತೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಇಬ್ಬರನ್ನು ಮೀರದ ಸದಸ್ಯರು;

(ಪಿ) ಅಧ್ಯಕ್ಷ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ, ಪದನಿಮಿತ್ತ;

(ಕ್ಯೂ) ನಿರ್ದೇಶಕ, ಅನ್ವಯಿಕ ಮಾನವ ಶಕ್ತಿ ಸಂಶೋಧನ ಸಂಸ್ಥೆ, ನವದೆಹಲಿ, ಪದನಿಮಿತ್ತ;

(ಆರ್) ಮಹಾನಿರ್ದೇಶಕ, ಭಾರತ ಕೃಷಿ ಸಂಶೋಧನಾ ಪರಿಷತ್ತು, ಪದನಿಮಿತ್ತ;

(ಎಸ್) ಮಹಾನಿರ್ದೇಶಕ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು, ಪದನಿಮಿತ್ತ;

(ಟಿ) ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಸದಸ್ಯ–ಕಾರ್ಯದರ್ಶಿ.

(5) ಉಪ ಪ್ರಕರಣ (4)ರಲ್ಲಿ ಏನೇ ಇದ್ದರೂ,–

(ಎ) ಪ್ರಥಮ ಅಧ್ಯಕ್ಷನು, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿಯ ಸಚಿವನಾಗಿರತಕ್ಕದ್ದು;

(ಬಿ) ಪರಿಷತ್ತಿನ ಪ್ರಥಮ ಉಪಾಧ್ಯಕ್ಷನು, ಕೇಂದ್ರ ಸರ್ಕಾರದ ರಾಜ್ಯ ಶಿಕ್ಷಣ ಸಚಿವನಾಗಿರತಕ್ಕದ್ದು;

(ಸಿ) ಪರಿಷತ್ತಿನ ಪ್ರಥಮ ಸದಸ್ಯ ಕಾರ್ಯದರ್ಶಿಯು, ಕೇಂದ್ರ ಸರ್ಕಾರದ (ತಾಂತ್ರಿಕ) ಶಿಕ್ಷಣ ಸಲಹೆಗಾರನಾಗಿರತಕ್ಕದ್ದು.

**4. ಸದಸ್ಯರ ಪದಾವಧಿ.**– (1) ಪದನಿಮಿತ್ತ ಸದಸ್ಯನ ಹೊರತು ಸದಸ್ಯನ ಪದಾವಧಿಯು ಪರಿಷತ್ತಿನ ಪ್ರಥಮ ರಚನೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದರ ತರುವಾಯ ಮೂರು ವರ್ಷಗಳಾಗಿರತಕ್ಕದ್ದು.

(2) ಅಧ್ಯಕ್ಷನ ಪದವು, ಅವನ ಮರಣ ಅಥವಾ ರಾಜೀನಾಮೆಯ ಅಥವಾ ಅಸ್ವಸ್ಥತೆ ಅಥವಾ ಇತರ ಅಸಮರ್ಥತೆಯ ಕಾರಣದಿಂದಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಶಕ್ತನಾದ ಕಾರಣದಿಂದಾಗಿ ಆಕಸ್ಮಿಕವಾಗಿ ರಿಕ್ತವಾದರೆ, ತತ್ಕಾಲದಲ್ಲಿ ಉಪಾಧ್ಯಕ್ಷನ ಪದವನ್ನು ಹೊಂದಿರುವವನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ಮುಂಚೆ ಯಾರೇ ಇತರ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿದ್ದ ಹೊರತು, ಅವನು ಯಾರ ಸ್ಥಾನದಲ್ಲಿ ಹಾಗೆ ಕಾರ್ಯನಿರ್ವಹಿಸಬೇಕೋ ಆ ವ್ಯಕ್ತಿಯ ಉಳಿದ ಪದಾವಧಿಯವರೆಗೆ ಅಧ್ಯಕ್ಷನ ಪದವನ್ನು ಹೊಂದಿರತಕ್ಕದ್ದು.

(3) ಉಪಾಧ್ಯಕ್ಷನ ಅಥವಾ ಯಾರೇ ಇತರ ಸದಸ್ಯನ ಪದವು, ಅವನ ಮರಣದ, ರಾಜೀನಾಮೆಯ ಅಥವಾ ಅಸ್ವಸ್ಥತೆಯ ಅಥವಾ ಇತರ ಅಸಮರ್ಥತೆಯ ಕಾರಣದಿಂದಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಶಕ್ತನಾದ ಕಾರಣದಿಂದಾಗಿ ಆಕಸ್ಮಿಕವಾಗಿ ರಿಕ್ತವಾದರೆ, ಅಂಥ ರಿಕ್ತ ಸ್ಥಾನವನ್ನು ಕೇಂದ್ರ ಸರ್ಕಾರವು ಹೊಸ ನೇಮಕವನ್ನು ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಸದಸ್ಯನು ಅವನು ಯಾರ ಸ್ಥಾನದಲ್ಲಿ ಹಾಗೆ ನೇಮಕಗೊಂಡನೋ ಆ ವ್ಯಕ್ತಿಯ ಉಳಿದ ಪದಾವಧಿಯವರೆಗೆ ಪದವನ್ನು ಹೊಂದಿರತಕ್ಕದ್ದು.

(4) ಉಪಾಧ್ಯಕ್ಷನು, ಕಾಲಕಾಲಕ್ಕೆ ಅಧ್ಯಕ್ಷನು ಹಾಗೆ ಅವನಿಗೆ ವಹಿಸಿಕೊಡಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(5) ಸದಸ್ಯರು ಅವರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಪಾಲಿಸಬೇಕಾದ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

**5. ಪರಿಷತ್ತಿನ ಸಭೆಗಳು.–** (1) ಪರಿಷತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾಲ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂಥ ಸಭೆಗಳಲ್ಲಿನ ಕೋರಂ ಸೇರಿದಂತೆ) ವ್ಯವಹಾರ ನಡೆಸುವುದರ ಸಂಬಂಧದಲ್ಲಿ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಪರಿಷತ್ತು ಕಡೇ ಪಕ್ಷ ವರ್ಷಕ್ಕೊಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಮತ್ತು ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷನು ಪರಿಷತ್ತಿನ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(3) ಯಾವುದೇ ಕಾರಣದಿಂದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಪರಿಷತ್ತಿನ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರಿಂದ ಆಯ್ಕೆಯಾದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಪರಿಷತ್ತಿನ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

**6. ರಿಕ್ತತೆ, ಮುಂತಾದವು ಪರಿಷತ್ತಿನ ವ್ಯವಹರಣೆಗಳನ್ನು ಅಮಾನ್ಯಗೊಳಿಸತಕ್ಕದ್ದಲ್ಲ.**– ಪರಿಷತ್ತಿನ ಯಾವುದೇ ಕಾರ್ಯ ಅಥವಾ ವ್ಯವಹರಣೆಯು,–

(ಎ) ಪರಿಷತ್ತಿನಲ್ಲಿನ ಯಾವುದೇ ರಿಕ್ತತೆ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನ್ಯತೆ; ಅಥವಾ

(ಬಿ) ಪರಿಷತ್ತಿನ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿನ ಯಾವುದೇ ನ್ಯೂನ್ಯತೆ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಪರಿಷತ್ತಿನ ಪ್ರಕ್ರಿಯೆಯಲ್ಲಿನ ಯಾವುದೇ ಅಕ್ರಮತೆ

– ಇವುಗಳ ಕಾರಣ ಮಾತ್ರದಿಂದ ಅಮಾನ್ಯವಾಗತಕ್ಕದ್ದಲ್ಲ.

**7. ನಿರ್ದಿಷ್ಟ ಉದ್ದೇಶಗಳಿಗಾಗಿ ಪರಿಷತ್ತಿನೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹವರ್ತನೆ.**– (1) ಪರಿಷತ್ತು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಜಾರಿಗೊಳಿಸಲು ಅದು ಯಾರ ನೆರವು ಅಥವಾ ಸಲಹೆಯನ್ನು ಅಪೇಕ್ಷಿಸುವುದೋ ಆ ಯಾರೇ ವ್ಯಕ್ತಿಯನ್ನು ವಿನಿಯಮಗಳ ಮೂಲಕ ಹಾಗೆ ನಿರ್ಧರಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ತನ್ನೊಂದಿಗೆ ಸಹವರ್ತಿಯಾಗಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ ಉಪ ಪ್ರಕರಣ (1)ರ ಮೇರೆಗೆ ಪರಿಷತ್ತಿನೊಂದಿಗೆ ಸಹ ವರ್ತಿಸಿಕೊಂಡ ವ್ಯಕ್ತಿಯು ಆ ಉದ್ದೇಶಕ್ಕೆ ಸುಸಂಗತವಾದ ಚರ್ಚೆಯಲ್ಲಿ ಭಾಗವಹಿಸುವ ಅಧಿಕಾರವನ್ನು

ಹೊಂದಿರತಕ್ಕದ್ದು, ಆದರೆ ಪರಿಷತ್ತಿನ ಸಭೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕದ್ದಲ್ಲ.

**8. ಪರಿಷತ್ತಿನ ಅಧಿಕಾರಿಗಳು ಮತ್ತು ಇತರ ನೌಕರನ ನೇಮಕ.–** (1) ಪರಿಷತ್ತು ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಅಸಮರ್ಥವಾಗಿ ನಿರ್ವಹಿಸಲು ಅದಕ್ಕೆ ಸಾಧ್ಯವಾಗುವ ಉದ್ದೇಶಕ್ಕಾಗಿ, ಈ ಸಂಬಂಧದಲ್ಲಿ ರಚಿಸಬಹುದಾದಂಥ ವಿನಿಯಮಗಳಿಗೊಳಪಟ್ಟು ಅದು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳು ಮತ್ತು ನೌಕರರನ್ನು (ಪ್ರತಿನಿಯೋಜನೆಯ ಮೇಲಾಗಲಿ ಅಥವಾ ಅನ್ಯಥಾ) ನೇಮಕ ಮಾಡತಕ್ಕದ್ದು:

ಪರಂತು, ಅಂಥ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವರ್ಗದ ಅಧಿಕಾರಿಗಳ ನೇಮಕವು ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟಿರತಕ್ಕದ್ದು.

(2) ಪರಿಷತ್ತು ನೇಮಕ ಮಾಡಿದ ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ನೌಕರನು ಅಂಥ ವಿನಿಯಮಗಳ ಮೂಲಕ ನಿರ್ಣಯಿಸಬಹುದಾದಂಥ ಸೇವಾ ಷರತ್ತುಗಳಿಗೊಳಪಟ್ಟಿರತಕ್ಕದ್ದು ಮತ್ತು ಅಂಥ ಪರಿಶ್ರಮಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

**9. ಪರಿಷತ್ತಿನ ಆದೇಶಗಳು ಮತ್ತು ಇತರ ಲಿಖಿತಗಳ ಪ್ರಮಾಣೀಕರಣ.–** ಪರಿಷತ್ತಿನ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳು ಅಧ್ಯಕ್ಷ ಅಥವಾ ಈ ಬಗ್ಗೆ ಪರಿಷತ್ತಿನಿಂದ ಅಧಿಕೃತನಾದ ಯಾರೇ ಇತರ ಸದಸ್ಯನ ಸಹಿಯ ಮೂಲಕ ಪ್ರಮಾಣೀಕೃತವಾಗತಕ್ಕದ್ದು ಮತ್ತು ಪರಿಷತ್ತಿನಿಂದ ಹೊರಡಿಸಿದ ಎಲ್ಲ ಇತರ ಲಿಖಿತಗಳು ಸದಸ್ಯ ಕಾರ್ಯದರ್ಶಿ ಅಥವಾ ಈ ಬಗ್ಗೆ ಅದೇ ರೀತಿಯಾಗಿ ಅಧಿಕೃತನಾದ ಪರಿಷತ್ತಿನ ಯಾರೇ ಇತರ ಅಧಿಕಾರಿಯ ಸಹಿಯ ಮೂಲಕ ಪ್ರಮಾಣೀಕೃತವಾಗತಕ್ಕದ್ದು.

## ಅಧ್ಯಾಯ III

## ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು

**10. ಪರಿಷತ್ತಿನ ಪ್ರಕಾರ್ಯಗಳು.–** ಪರಿಷತ್ತು ತಾಂತ್ರಿಕ ಶಿಕ್ಷಣದ ಸಮನ್ವಿತ ಮತ್ತು ಸಮಗ್ರ ಅಭಿವೃದ್ಧಿ ಮತ್ತು ಮಾನಕಗಳ ನಿರ್ವಹಣೆಯನ್ನು ಸುನಿಶ್ಚಿತಗೊಳಿಸಲು ತಾನು ಯೋಗ್ಯವೆಂದು ಭಾವಿಸಬಹುದಾದಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು ಅದರ ಕರ್ತವ್ಯವಾಗಿರತಕ್ಕದ್ದು; ಮತ್ತು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಪರಿಷತ್ತು,–

(ಎ) ತಾಂತ್ರಿಕ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಸರ್ವೇಕ್ಷಣೆ ಕೈಗೊಳ್ಳಬಹುದು, ಎಲ್ಲಾ ಸಂಬಂಧಿತ ವಿಷಯಗಳ ಬಗ್ಗೆ ಆಧಾರಾಂಶಗಳನ್ನು ಸಂಗ್ರಹಿಸಬಹುದು ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಅಗತ್ಯವಾದ ಬೆಳವಣಿಗೆ ಮತ್ತು ಅಭಿವೃದ್ಧಿಯ ಮುನ್ಸೂಚನೆ ನೀಡಬಹುದು;

(ಬಿ) ದೇಶದ ಎಲ್ಲಾ ಮಟ್ಟಗಳಲ್ಲಿನ ತಾಂತ್ರಿಕ ಶಿಕ್ಷಣಾಭಿವೃದ್ಧಿಯನ್ನು ಸಮನ್ವಯಗೊಳಿಸಬಹುದು;

(ಸಿ) ತಾನು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಅನುದಾನಗಳನ್ನು ಪರಿಷತ್ತಿನ ನಿಧಿಯಿಂದ,–

(i) ತಾಂತ್ರಿಕ ಸಂಸ್ಥೆಗಳಿಗೆ; ಮತ್ತು

(ii) ಆಯೋಗದ ಸಹಯೋಗದೊಡನೆ ತಾಂತ್ರಿಕ ಶಿಕ್ಷಣವನ್ನು ನೀಡುವ ವಿಶ್ವವಿದ್ಯಾಲಯಗಳಿಗೆ – ಹಂಚಿಕೆ ಮಾಡಬಹುದು ಮತ್ತು ಬಟವಾಡೆ ಮಾಡಬಹುದು;

(ಡಿ) ಅಭಿವೃದ್ಧಿಯ ಅಗತ್ಯಗಳನ್ನು ಪೂರೈಸಲು ಮತ್ತು ಶಿಕ್ಷಣದ ಪ್ರಕ್ರಿಯೆಗಳ ಸಮಗ್ರ ಸುಧಾರಣೆಗಾಗಿ ಸಂಸ್ಥಾಪಿತ ಮತ್ತು ಹೊಸ ತಂತ್ರಜ್ಞಾನಗಳಲ್ಲಿ ನವೀನತೆ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಹೊಸ ತಂತ್ರಜ್ಞಾನಗಳ ಉತ್ಪಾದನೆ, ಅಂಗೀಕಾರ ಮತ್ತು ಅನುಕೂಲ ಇವುಗಳ ಸಂವರ್ಧನೆ ಮಾಡಬಹುದು;

(ಇ) ಮಹಿಳೆ ಮತ್ತು ಅಂಗವಿಕಲರು ಮತ್ತು ಸಮಾಜದ ದುರ್ಬಲ ವರ್ಗದವರಿಗಾಗಿ ತಾಂತ್ರಿಕ ಶಿಕ್ಷಣವನ್ನು ಸಂವರ್ಧಿಸಲು ಕಾರ್ಯಯೋಜನೆಗಳನ್ನು ರೂಪಿಸಬಹುದು;

(ಎಫ್) ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು, ಕೈಗಾರಿಕೆ ಮತ್ತು ಸಮುದಾಯವೂ ಸೇರಿದಂತೆ ತಾಂತ್ರಿಕ ಶಿಕ್ಷಣ ಪದ್ಧತಿ ಮತ್ತು ಇತರ ಸುಸಂಬದ್ಧ ಪದ್ಧತಿಗಳ ನಡುವೆ ಪರಿಣಾಮಕಾರಿ ಸಂಬಂಧವನ್ನು ಏರ್ಪಡಿಸಬಹುದು;

(ಜಿ) ತಾಂತ್ರಿಕ ಶಿಕ್ಷಣವನ್ನು ಕಲಿಸುವ ತಾಂತ್ರಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗಾಗಿ ಸೂಕ್ತ ನಿರ್ವಹಣೆಯ ಮೌಲ್ಯನಿರ್ಣಯ ವ್ಯವಸ್ಥೆಯನ್ನು ಕ್ರಮಬದ್ಧವಾಗಿ ಹೊಣೆಗಾರಿಕೆಯಿಂದ ಜಾರಿಗೊಳಿಸುವುದಕ್ಕಾಗಿ ಪ್ರಮಾಣಗಳು ಮತ್ತು ಕೌಶಲಗಳನ್ನು ಅಳವಡಿಸಿಕೊಳ್ಳಬಹುದು;

(ಹೆಚ್) ಶಿಕ್ಷಕರ ಪ್ರಾರಂಭಿಕ ಮತ್ತು ಸೇವಾವಧಿ ತರಬೇತಿಗಾಗಿ ಕಾರ್ಯಯೋಜನೆಗಳನ್ನು ರೂಪಿಸಬಹುದು ಮತ್ತು ಶಿಕ್ಷಕರ ನಿರಂತರ ಶಿಕ್ಷಣವೂ ಸೇರಿ ಸಿಬ್ಬಂದಿವರ್ಗದ ಅಭಿವೃದ್ಧಿ

ಕಾರ್ಯಕ್ರಮಗಳನ್ನು ಒದಗಿಸುವ ಸಂಸ್ಥೆಗಳು ಅಥವಾ ಕೇಂದ್ರಗಳನ್ನು ಗುರುತಿಸಬಹುದು ಮತ್ತು ಹೊಸ ಕೇಂದ್ರಗಳನ್ನು ಸ್ಥಾಪಿಸಬಹುದು;

(ಐ) ವ್ಯಾಸಂಗ ಕ್ರಮಗಳು, ಪಠ್ಯಕ್ರಮ, ದೈಹಿಕ ಮತ್ತು ಬೋಧನಾ ಸೌಲಭ್ಯಗಳು, ಸಿಬ್ಬಂದಿ ಮಾದರಿ, ಸಿಬ್ಬಂದಿ ವಿದ್ಯಾರ್ಹತೆಗಳು, ಗುಣಾತ್ಮಕ ಬೋಧನೆ, ನಿರ್ಧರಣೆ ಮತ್ತು ಪರೀಕ್ಷೆಗಳಿಗಾಗಿ ಪ್ರಮಾಣಗಳು ಮತ್ತು ಮಾನಕಗಳನ್ನು ನಿಗದಿಪಡಿಸಬಹುದು;

(ಜೆ) ಪಾಠಶುಲ್ಕ ಮತ್ತು ಇತರ ಶುಲ್ಕಗಳನ್ನು ವಿಧಿಸಲು ಪ್ರಮಾಣಗಳು ಮತ್ತು ಮಾರ್ಗದರ್ಶಕ ಸೂತ್ರಗಳನ್ನು ನಿಗದಿಗೊಳಿಸುವುದು;

(ಕೆ) ಹೊಸ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಲು ಮತ್ತು ಸಂಬಂಧಪಟ್ಟ ಏಜೆನ್ಸಿಗಳೊಂದಿಗೆ ಸಮಾಲೋಚಿಸಿ ಹೊಸ ವ್ಯಾಸಂಗ ಕ್ರಮಗಳು ಅಥವಾ ಕಾರ್ಯಕ್ರಮಗಳನ್ನು ಜಾರಿಗೆ ತರಲು ಅನುಮೋದನೆ ನೀಡಬಹುದು;

(ಎಲ್) ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿನ ಯಾವುದೇ ವೃತ್ತಿಪರ ನಿಕಾಯ ಅಥವಾ ಸಂಸ್ಥೆಗೆ ಪರೀಕ್ಷೆಗಳನ್ನು ನಡೆಸುವ ಮತ್ತು ಸದಸ್ಯತ್ವದ ಪ್ರಮಾಣಪತ್ರಗಳನ್ನು ಕೊಡುವುದೂ ಸೇರಿ, ತನ್ನ ಕ್ಷೇತ್ರದಲ್ಲಿನ ಅಂಥ ವೃತ್ತಿಯನ್ನು ಉತ್ತೇಜಿಸುವುದಕ್ಕಾಗಿ ಅದಕ್ಕೆ ಅಧಿಕಾರಗಳು, ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಕೊಡುವ ಮೂಲಕ ಸನ್ನದು ನೀಡುವ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಬಹುದು;

(ಎಂ) ತಾಂತ್ರಿಕ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ನೀಡಲು ಪ್ರಮಾಣಗಳನ್ನು ವಿಧಿಸಬಹುದು;

(ಎನ್) ತಾಂತ್ರಿಕ ಶಿಕ್ಷಣದ ವಾಣಿಜ್ಯೀಕರಣಗಳನ್ನು ತಡೆಗಟ್ಟಲು ಎಲ್ಲ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬಹುದು;

(ಒ) ತಾಂತ್ರಿಕ ಶಿಕ್ಷಣವನ್ನು ನೀಡುವ ತಾಂತ್ರಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಮಾರ್ಗದರ್ಶನ ಸೂತ್ರಗಳನ್ನು ವಿಧಿಸಬಹುದು;

(ಪಿ) ಯಾವುದೇ ತಾಂತ್ರಿಕ ಸಂಸ್ಥೆಯನ್ನು ಪರಿವೀಕ್ಷಿಸಬಹುದು ಅಥವಾ ಪರಿವೀಕ್ಷಿಸುವಂತೆ ಮಾಡಬಹುದು;

(ಕ್ಯೂ) ಗೊತ್ತುಪಡಿಸಿದ ಕಾಲಾವಧಿಯೊಳಗೆ ಪರಿಷತ್ತು ನೀಡಿದ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ ತಾಂತ್ರಿಕ ಸಂಸ್ಥೆಗಳಿಗೆ ವ್ಯಾಸಂಗ ಕ್ರಮಗಳು ಮತ್ತು ಕಾರ್ಯಕ್ರಮಗಳ ಸಂಬಂಧದಲ್ಲಿನ

ಅನುದಾನಗಳನ್ನು ತಡೆಹಿಡಿಯಬಹುದು ಅಥವಾ ನಿಲ್ಲಿಸಬಹುದು ಮತ್ತು ಪರಿಷತ್ತಿನ ನಿರ್ದೇಶನಗಳ ಪಾಲನೆಯನ್ನು ಸುನಿಶ್ಚಿತಗೊಳಿಸಲು ಅವಶ್ಯವಾಗಬಹುದಾದಂಥ ಇತರ ಕ್ರಮಗಳನ್ನು ತೆಗೆದುಕೊಳ್ಳಬಹುದು;

(ಆರ್) ಪರಿಷತ್ತಿನ ಹೊಣೆಗಾರಿಕೆಗಳ ಪರಿಣಾಮಕಾರಿ ನಿರ್ವಹಣೆಯನ್ನು ಸುನಿಶ್ಚಿತಗೊಳಿಸಲು ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಬಲಪಡಿಸಲು ಮತ್ತು ಹೊಸ ಸಂಸ್ಥೆಗಳನ್ನು ರಚಿಸಲು ಮತ್ತು ಅಗತ್ಯತೆಗಳ ಆಧಾರದ ಮೇಲೆ ವೃತ್ತಿಪರ, ತಾಂತ್ರಿಕ ಮತ್ತು ಸಹಾಯಕ ಸಿಬ್ಬಂದಿ ಸ್ಥಾನಗಳನ್ನು ಸೃಜಿಸಲು ಕ್ರಮಗಳನ್ನು ಕೈಗೊಳ್ಳಬಹುದು;

(ಎಸ್) ತಾಂತ್ರಿಕ ಶಿಕ್ಷಣದ ಬೇರೆ ಬೇರೆ ಮಟ್ಟಗಳ ಮತ್ತು ಮಾದರಿಗಳ ವ್ಯಾಸಂಗದ ಕ್ರಮಗಳನ್ನು ಒದಗಿಸುವ ಅನುದಾನಗಳನ್ನು ಪಡೆಯಲು ಯೋಗ್ಯವಾದ ಸಂಸ್ಥೆಗಳನ್ನು ಘೋಷಿಸಬಹುದು;

(ಟಿ) ತಾಂತ್ರಿಕ ಶಿಕ್ಷಣವನ್ನು ನೀಡುವ ಯಾವುದೇ ಸಂಸ್ಥೆಯನ್ನು ಪರಿಗಣಿತ ವಿಶ್ವವಿದ್ಯಾಲಯವೆಂಬುದಾಗಿ ಘೋಷಿಸಲು ಆಯೋಗಕ್ಕೆ ಸಲಹೆ ನೀಡುವುದು;

(ಯು) ತಾನು ನಿರ್ದಿಷ್ಟಪಡಿಸಿದ ಮಾರ್ಗದರ್ಶಕ ಸೂತ್ರಗಳು, ಪ್ರಮಾಣಗಳು ಮತ್ತು ಮಾನಕಗಳ ಆಧಾರದ ಮೇಲೆ ತಾಂತ್ರಿಕ ಸಂಸ್ಥೆಗಳ ಅಥವಾ ಕಾರ್ಯಕ್ರಮಗಳ ನಿಯತಕಾಲಿಕ ಮೌಲ್ಯನಿರ್ಧರಣೆ ಮಾಡಲು ಮತ್ತು ಅದಕ್ಕೆ ಅಥವಾ ಪರಿಷತ್ತಿಗೆ ಅಥವಾ ಆಯೋಗಕ್ಕೆ ಅಥವಾ ನಿಕಾಯಗಳಿಗೆ ಆ ಸಂಸ್ಥೆಯ ಅಥವಾ ಆ ಕಾರ್ಯಕ್ರಮದ ಮಾನ್ಯತೆ ಅಥವಾ ಅಮಾನ್ಯತೆ ಸಂಬಂಧದಲ್ಲಿ ಶಿಫಾರಸ್ಸು ಮಾಡಲು ರಾಷ್ಟ್ರೀಯ ಅಂಗೀಕರಣ ಮಂಡಳಿಯನ್ನು ಸ್ಥಾಪಿಸಬಹುದು;

(ವಿ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**11. ಪರಿವೀಕ್ಷಣೆ.–** (1) ತಾಂತ್ರಿಕ ಸಂಸ್ಥೆ ಅಥವಾ ಒಂದು ವಿಶ್ವವಿದ್ಯಾಲಯದ ಆರ್ಥಿಕ ಅಗತ್ಯತೆಗಳು ಅಥವಾ ಅದರ ಬೋಧನೆ, ಪರೀಕ್ಷೆ ಮತ್ತು ಸಂಶೋಧನೆಯ ಮಾನಕಗಳನ್ನು ಖಚಿತಪಡಿಸಿಕೊಳ್ಳುವ ಉದ್ದೇಶಗಳಿಗಾಗಿ ಪರಿಷತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಅಂಥ ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯದ ಯಾವುದೇ ವಿಭಾಗ ಅಥವಾ ವಿಭಾಗಗಳ ಪರಿವೀಕ್ಷಣೆ ಮಾಡಿಸಬಹುದು.

(2) ಪರಿಷತ್ತು, ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯಕ್ಕೆ ಉಪ ಪ್ರಕರಣ (1)ರ ಮೇರೆಗಿನ ಯಾವುದೇ ಪರಿವೀಕ್ಷಣೆಯನ್ನು ಯಾವ ದಿನಾಂಕದಂದು ಮಾಡಬೇಕಾಗಿದೆಯೋ ಅದನ್ನು ತಿಳಿಸತಕ್ಕದ್ದು ಮತ್ತು ಆ ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯವು ನಿಯಮಿಸಬಹುದಾದಂಥ ರೀತಿಯಲ್ಲಿ ಪರಿವೀಕ್ಷಣೆಯಲ್ಲಿ ಸಹವರ್ತಿಯಾಗಿರಲು ಹಕ್ಕುಳ್ಳವರಾಗಿರತಕ್ಕದ್ದು.

(3) ಪರಿಷತ್ತು, ಆ ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯಕ್ಕೆ ಯಾವುದೇ ಅಂಥ ಯಾವುದೇ ವೀಕ್ಷಣೆಯ ಫಲಿತಾಂಶಗಳ ಸಂಬಂಧದಲ್ಲಿ ತನ್ನ ಅಭಿಪ್ರಾಯಗಳನ್ನು ತಿಳಿಸತಕ್ಕದ್ದು ಮತ್ತು ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯದ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಆ ಸಂಸ್ಥೆ ಅಥವಾ ವಿಶ್ವವಿದ್ಯಾಲಯಕ್ಕೆ ಅಂಥ ಪರಿವೀಕ್ಷಣೆಯ ಫಲಿತಾಂಶವಾಗಿ ಕೈಗೊಳ್ಳಬೇಕಾದ ಕ್ರಮವನ್ನು ಶಿಫಾರಸ್ಸು ಮಾಡಬಹುದು.

(4) ಈ ಪ್ರಕರಣದ ಮೇರೆಗೆ ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯದೊಂದಿಗೆ ಮಾಡಬೇಕಾದ ಎಲ್ಲಾ ಪತ್ರ ವ್ಯವಹಾರಗಳನ್ನು ಅದರ ಕಾರ್ಯನಿರ್ವಾಹಕ ಪ್ರಾಧಿಕಾರಿಯೊಂದಿಗೆ ಮಾಡತಕ್ಕದ್ದು ಮತ್ತು ಆ ತಾಂತ್ರಿಕ ಸಂಸ್ಥೆ ಅಥವಾ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪ್ರಾಧಿಕಾರಿಯು ಉಪ ಪ್ರಕರಣ (3)ರಲ್ಲಿ ಉಲ್ಲೇಖಿಸಿದ ಯಾವುದೇ ಅಂಥ ಶಿಫಾರಸ್ಸನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಕೈಗೊಳ್ಳಲು ಪ್ರಸ್ತಾವಿಸಿದ ಕ್ರಮವೇನಾದರೂ ಇದ್ದಲ್ಲಿ ಅದನ್ನು ಪರಿಷತ್ತಿಗೆ ತಿಳಿಸತಕ್ಕದ್ದು.

## ಅಧ್ಯಾಯ IV

## ಪರಿಷತ್ತಿನ ನಿಕಾಯಗಳು

**12. ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿ.–** (1) ಪರಿಷತ್ತು, ತಾನು ವಹಿಸಿಕೊಡಬಹುದಾದಂಥ ಪ್ರಕಾರ್ಯಗಳ ನಿರ್ವಹಣೆಗಾಗಿ ಕಾರ್ಯನಿರ್ವಾಹಕ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಕಾರ್ಯನಿರ್ವಾಹಕ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರತಕ್ಕದ್ದು, ಎಂದರೆ:–

(ಎ) ಪರಿಷತ್ತಿನ ಅಧ್ಯಕ್ಷ;

(ಬಿ) ಪರಿಷತ್ತಿನ ಉಪಾಧ್ಯಕ್ಷ;

(ಸಿ) ಕೇಂದ್ರ ಸರ್ಕಾರದ ಮಂತ್ರಾಲಯದಲ್ಲಿ ಶಿಕ್ಷಣ ವಿಷಯವನ್ನು ಕುರಿತು ವ್ಯವಹರಿಸುವ ಕೇಂದ್ರ ಸರ್ಕಾರದ ಕಾರ್ಯದರ್ಶಿ, ಪದನಿಮಿತ್ತ;

(ಡಿ) ಪ್ರಾದೇಶಿಕ ಸಮಿತಿಗಳ ಇಬ್ಬರು ಅಧ್ಯಕ್ಷರು;

(ಇ) ಅಧ್ಯಯನ ಮಂಡಳಿಗಳ ಮೂವರು ಅಧ್ಯಕ್ಷರು;

(ಎಫ್) ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯವನ್ನು ಪ್ರತಿನಿಧಿಸುವ ಪರಿಷತ್ತಿನ ಒಬ್ಬ ಸದಸ್ಯ, ಪದನಿಮಿತ್ತ;

(ಜಿ) ಪ್ರಕರಣ 3ರ ಉಪ ಪ್ರಕರಣ (4)ರ (ಕೆ) ಖಂಡದ ಮೇರೆಗೆ ರಾಜ್ಯ ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳನ್ನು ಪ್ರತಿನಿಧಿಸುವ ಎಂಟು ಜನ ಸದಸ್ಯರಲ್ಲಿ ನಾಲ್ವರು;

(ಹೆಚ್) ಪರಿಷತ್ತಿನ ಅಧ್ಯಕ್ಷನು ನಾಮನಿರ್ದೇಶನ ಮಾಡಬೇಕಾದ ತಾಂತ್ರಿಕ ಶಿಕ್ಷಣದ ಸುಸಂಬದ್ಧ ಕ್ಷೇತ್ರಗಳಲ್ಲಿ ನೈಪುಣ್ಯ ಮತ್ತು ಪ್ರಖ್ಯಾತಿ ಹೊಂದಿದ ನಾಲ್ವರು ಸದಸ್ಯರು;

(ಐ) ವಿಶ್ವವಿದ್ಯಾಲಯ ಅನುದಾನಗಳ ಆಯೋಗದ ಅಧ್ಯಕ್ಷ, ಪದನಿಮಿತ್ತ;

(ಜೆ) ನಿರ್ದೇಶಕ, ಅನ್ವಯಿಕ ಮಾನವ ಶಕ್ತಿ ಸಂಶೋಧನಾ ಸಂಸ್ಥೆ, ನವದೆಹಲಿ, ಪದನಿಮಿತ್ತ;

(ಕೆ) ಮಹಾನಿರ್ದೇಶಕ, ಭಾರತ ಕೃಷಿ ಸಂಶೋಧನಾ ಪರಿಷತ್ತು, ಪದನಿಮಿತ್ತ;

(ಎಲ್) ಪರಿಷತ್ತಿನ ಸದಸ್ಯ –ಕಾರ್ಯದರ್ಶಿ.

(3) ಪರಿಷತ್ತಿನ ಅಧ್ಯಕ್ಷ ಮತ್ತು ಸದಸ್ಯ–ಕಾರ್ಯದರ್ಶಿ ಇವರು ಅನುಕ್ರಮವಾಗಿ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯ–ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ, ಪರಿಷತ್ತಿನ ಉಪಾಧ್ಯಕ್ಷನು ಕಾರ್ಯನಿರ್ವಾಹಕ ಸಮಿತಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರೂ ಗೈರುಹಾಜರಿದ್ದಾಗ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(5) ಕಾರ್ಯನಿರ್ವಾಹಕ ಸಮಿತಿಯು, ಪರಿಷತ್ತು ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂಥ ಕಾಲ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (ಅಂಥ ಸಭೆಗಳಲ್ಲಿನ ಕೋರಂ ಸೇರಿದಂತೆ) ಆ ಸಭೆಗಳಲ್ಲಿನ ವ್ಯವಹಾರ ನಿರ್ವಹಣೆಯ ಸಂಬಂಧದಲ್ಲಿ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**13. ಅಧ್ಯಯನ ಮಂಡಲಿಗಳು.–** (1) ಪರಿಷತ್ತು, ಈ ಕೆಳಕಂಡ ಅಧ್ಯಯನ ಮಂಡಳಿಗಳನ್ನು ಸ್ಥಾಪಿಸತಕ್ಕದ್ದು, ಎಂದರೆ:–

(i) ಅಖಿಲ ಭಾರತ ವೃತ್ತಿಪರ ಶಿಕ್ಷಣ ಮಂಡಳಿ;

(ii) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ;

(iii) ಅಖಿಲ ಭಾರತ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸ್ನಾತಕಪೂರ್ವ ಅಧ್ಯಯನ ಮಂಡಳಿ;

(iv) ಅಖಿಲ ಭಾರತ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ಮಂಡಳಿ;

(v) ಅಖಿಲ ಭಾರತ ವ್ಯವಸ್ಥಾಪನಾ ಅಧ್ಯಯನ ಮಂಡಳಿ.

(2) ಪರಿಷತ್ತು ತಾನು ಅವಶ್ಯವೆಂದು ಪರಿಗಣಿಸಿದರೆ ತಾನು ಯೋಗ್ಯವೆಂದು ಭಾವಿಸಬಹುದಾದಂಥ ಇತರ ಅಧ್ಯಯನ ಮಂಡಳಿಗಳನ್ನು ಸ್ಥಾಪಿಸಬಹುದು.

(3) ಪ್ರತಿಯೊಂದು ಅಧ್ಯಯನ ಮಂಡಳಿಯು ವ್ಯಾಸಂಗ ಕ್ರಮಗಳ ಪ್ರಮಾಣಗಳು, ಮಾನಕಗಳು, ಮಾದರಿ ಪಾಠಕ್ರಮ, ಮಾದರಿ ಸೌಲಭ್ಯಗಳು ಮತ್ತು ವ್ಯಾಸಂಗ ಕ್ರಮಗಳ ರಚನೆ ಇವುಗಳೂ ಸೇರಿ ತನಗೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಬರುವ ಶೈಕ್ಷಣಿಕ ವಿಷಯಗಳ ಬಗ್ಗೆ ಕಾರ್ಯನಿರ್ವಹಣಾ ಸಮಿತಿಗೆ ಸಲಹೆ ನೀಡತಕ್ಕದ್ದು.

(4) ಅಧ್ಯಯನ ಮಂಡಳಿಗಳ ಸಂಬಂಧಿತ ಕ್ಷೇತ್ರ, ಅಧಿಕಾರಗಳು, ರಚನೆ ಮತ್ತು ಪ್ರಕಾರ್ಯಗಳು, ಪರಿಷತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

**14. ಪ್ರಾದೇಶಿಕ ಸಮಿತಿಗಳು.–** (1) ಪರಿಷತ್ತು, ಈ ಕೆಳಕಂಡ ಪ್ರಾದೇಶಿಕ ಸಮಿತಿಗಳನ್ನು ಸ್ಥಾಪಿಸತಕ್ಕದ್ದು, ಎಂದರೆ:–

(i) ಕಾನ್‌ಪುರದಲ್ಲಿ ತನ್ನ ಕಚೇರಿಯನ್ನು ಹೊಂದಿರುವ ಉತ್ತರ ಪ್ರಾದೇಶಿಕ ಸಮಿತಿ;

(ii) ಮದರಾಸಿನಲ್ಲಿ ತನ್ನ ಕಚೇರಿಯನ್ನು ಹೊಂದಿರುವ ದಕ್ಷಿಣ ಪ್ರಾದೇಶಿಕ ಸಮಿತಿ;

(iii) ಮುಂಬಯಿಯಲ್ಲಿ ತನ್ನ ಕಚೇರಿಯನ್ನು ಹೊಂದಿರುವ ಪಶ್ಚಿಮ ಪ್ರಾದೇಶಿಕ ಸಮಿತಿ;

(iv) ಕಲ್ಕತ್ತದಲ್ಲಿ ತನ್ನ ಕಚೇರಿಯನ್ನು ಹೊಂದಿರುವ ಪೂರ್ವ ಪ್ರಾದೇಶಿಕ ಸಮಿತಿ.

(2) ಪರಿಷತ್ತು, ತಾನು ಅವಶ್ಯವೆಂದು ಪರಿಗಣಿಸಿದರೆ ತಾನು ಯೋಗ್ಯವೆಂದು ಭಾವಿಸಬಹುದಾದಂಥ ಇತರ ಪ್ರಾದೇಶಿಕ ಸಮಿತಿಗಳನ್ನು ಸ್ಥಾಪಿಸಬಹುದು.

(3) ಪ್ರಾದೇಶಿಕ ಸಮಿತಿಯು ಆ ಪ್ರದೇಶದೊಳಗೆ ತಾಂತ್ರಿಕ ಶಿಕ್ಷಣವನ್ನು ಯೋಜಿಸುವ, ಸಂವರ್ಧಿಸುವ ಮತ್ತು ವಿನಿಯಮಿಸುವ ಸಂಬಂಧದಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲು ಪರಿಷತ್ತಿಗೆ ಸಲಹೆ ಮತ್ತು ನೆರವು ನೀಡತಕ್ಕದ್ದು.

(4) ಯಾವ ಪ್ರದೇಶಕ್ಕೆ ಪ್ರಾದೇಶಿಕ ಸಮಿತಿಗಳನ್ನು ಸ್ಥಾಪಿಸಬಹುದಾಗಿದೆಯೋ ಆ ಪ್ರದೇಶ ಮತ್ತು ಅಂಥ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳನ್ನು ವಿನಿಯಮಗಳ ಮೂಲಕ ನಿಯಮಿಸತಕ್ಕದ್ದು.

## ಅಧ್ಯಾಯ V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**15. ಪರಿಷತ್ತಿಗೆ ಸಂದಾಯ.–** ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ತಕ್ಕ ಧನವಿನಿಯೋಗದ ತರುವಾಯ, ಈ ಅಧಿನಿಯಮದ ಮೇರೆಗೆ ಪರಿಷತ್ತಿಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಅವಶ್ಯವೆಂದು ಪರಿಗಣಿಸಬಹುದಾದಂಥ ಮೊತ್ತಗಳನ್ನು ಪ್ರತಿ ಹಣಕಾಸು ವರ್ಷದಲ್ಲಿ ಪರಿಷತ್ತಿಗೆ ಸಂದಾಯ ಮಾಡಬಹುದು.

**16. ಪರಿಷತ್ತಿನ ನಿಧಿ.–** (1) ಪರಿಷತ್ತು ತನ್ನ ಸ್ವಂತ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಕಾಲ ಕಾಲಕ್ಕೆ ಕೇಂದ್ರ ಸರ್ಕಾರವು ಅದಕ್ಕೆ ಸಂದಾಯ ಮಾಡಬಹುದಾದ ಎಲ್ಲ ಮೊತ್ತಗಳನ್ನು ಮತ್ತು (ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಪರಿಷತ್ತಿಗೆ ವಹಿಸಿಕೊಡಬಹುದಾದ ಯಾವುದೇ ಮೊತ್ತವು ಸೇರಿ) ಪರಿಷತ್ತಿನ ಎಲ್ಲ ಜಮೆಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಅದರೊಳಗಿಂದ ಪರಿಷತ್ತಿನ ಎಲ್ಲಾ ಸಂದಾಯಗಳನ್ನು ಮಾಡತಕ್ಕದ್ದು.

(2) ನಿಧಿಗೆ ಸೇರಿದ ಎಲ್ಲಾ ಹಣವನ್ನು, ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟು, ಪರಿಷತ್ತು ನಿರ್ಣಯಿಸಬಹುದಾದಂಥ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು ಅಥವಾ ಅಂಥ ರೀತಿಯಲ್ಲಿ ತೊಡಗಿಸತಕ್ಕದ್ದು.

(3) ಪರಿಷತ್ತು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ತಾನು ಯೋಗ್ಯವೆಂದು ಭಾವಿಸಬಹುದಾದಂಥ ಮೊತ್ತಗಳನ್ನು ಖರ್ಚು ಮಾಡಬಹುದು ಮತ್ತು ಅಂಥ ಮೊತ್ತಗಳನ್ನು, ಪರಿಷತ್ತಿನ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಭಾವಿಸತಕ್ಕದ್ದು.

**17. ಆಯವ್ಯಯ ಪತ್ರ.**– ಪರಿಷತ್ತು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿವರ್ಷ ಮುಂದಿನ ಹಣಕಾಸು ವರ್ಷದ ಸಂಬಂಧದಲ್ಲಿ ಜಮೆಗಳು ಮತ್ತು ವೆಚ್ಚಗಳನ್ನು ತೋರಿಸುವ ಆಯವ್ಯಯ ಪತ್ರವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**18. ವಾರ್ಷಿಕ ವರದಿ.**– ಪರಿಷತ್ತು, ಪ್ರತಿ ವರ್ಷಕ್ಕೊಮ್ಮೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದಲ್ಲಿ ಹಿಂದಿನ ವರ್ಷದ ಅದರ ಕಾರ್ಯಚಟುವಟಿಕೆಗಳ ಯಥಾರ್ಥ ಮತ್ತು ಪೂರ್ಣವಾದ ವಿವರಣೆಯನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**19. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.**– (1) ಪರಿಷತ್ತು, ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅದರ ಲೆಕ್ಕ ಪತ್ರಗಳ ಸಂಬಂಧದಲ್ಲಿ ಲೆಕ್ಕ ಪುಸ್ತಕಗಳು ಮತ್ತು ಇತರ ಪುಸ್ತಕಗಳನ್ನು ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು.

(2) ಪರಿಷತ್ತು, ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿದ ತರುವಾಯ ಆದಷ್ಟು ಬೇಗನೆ, ಕೇಂದ್ರ ಸರ್ಕಾರವು ಭಾರತ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ನಮೂನೆಯಲ್ಲಿ ತನ್ನ ಲೆಕ್ಕಪತ್ರಗಳ ಒಂದು ವಿವರಣೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅಂಥ ದಿನಾಂಕದೊಳಗೆ ಭಾರತ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನಿಗೆ ಕಳುಹಿಸಿ ಕೊಡತಕ್ಕದ್ದು.

(3) ಪರಿಷತ್ತಿನ ಲೆಕ್ಕಪತ್ರಗಳನ್ನು ಭಾರತದ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ಯೋಗ್ಯವೆಂದು ಭಾವಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

(4) ಭಾರತ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪರಿಷತ್ತಿನ ಲೆಕ್ಕಪತ್ರಗಳು ಮತ್ತು ಅದರ ಮೇಲಿನ ಲೆಕ್ಕಪರಿಶೋಧಕನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಪ್ರತಿವರ್ಷ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**20. ಕೇಂದ್ರ ಸರ್ಕಾರದ ನಿರ್ದೇಶನಗಳು.–** (1) ಪರಿಷತ್ತು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳ ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರ್ಯನೀತಿಯ ಪ್ರಶ್ನೆಗಳ ಸಂಬಂಧವಾಗಿ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅದಕ್ಕೆ ಬರಹದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು.

(2) ಒಂದು ಪ್ರಶ್ನೆಯು ಕಾರ್ಯನೀತಿಯ ಪ್ರಶ್ನೆಯಾಗಿದೆಯೇ, ಇಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**21. ಪರಿಷತ್ತನ್ನು ಅಧಿಕ್ರಮಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು, ಪರಿಷತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥವಾಗಿದೆ ಅಥವಾ ಕರ್ತವ್ಯದ ನಿರ್ವಹಣೆಯಲ್ಲಿ ಪದೇ ಪದೇ ತಪ್ಪು ಮಾಡಿದೆ ಎಂದು ಅಥವಾ ತನ್ನ ಅಧಿಕಾರಗಳನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆ ಎಂದು ಅಥವಾ ಪ್ರಕರಣ 20ರ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ಅಥವಾ ಸಾಕಷ್ಟು ಕಾರಣವಿಲ್ಲದೆ ತಪ್ಪಿದೆ ಎಂದು ಅಭಿಪ್ರಾಯಪಟ್ಟರೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪರಿಷತ್ತನ್ನು ಅಧಿಕ್ರಮಿಸಬಹುದು:

ಪರಂತು, ಈ ಉಪ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು ಪರಿಷತ್ತಿಗೆ ಅದನ್ನು ಏಕೆ ರದ್ದುಗೊಳಿಸಕೂಡದು ಎಂಬುದಕ್ಕೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪರಿಷತ್ತಿನ ವಿವರಣೆ ಮತ್ತು ಆಕ್ಷೇಪಣೆಗಳು ಏನಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಉಪ ಪ್ರಕರಣ (1)ರ ಮೇರೆಗೆ ಪರಿಷತ್ತನ್ನು ಅಧಿಕ್ರಮಿಸುವ ಅಧಿಸೂಚನೆಯ ಪ್ರಕಟಣೆಯ ನಂತರ,–

(ಎ) ಪರಿಷತ್ತಿನ ಎಲ್ಲಾ ಸದಸ್ಯರು, ಅವರ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಅಧಿಕ್ರಮಣದ ದಿನಾಂಕದಿಂದ ಅಂಥ ಸದಸ್ಯರಾಗಿ ಅವರ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅಧಿಕ್ರಮಣದ ಅವಧಿಯಲ್ಲಿ ಪರಿಷತ್ತು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಸಿ) ಪರಿಷತ್ತಿನಲ್ಲಿ ನಿಹಿತವಾದ ಎಲ್ಲ ಸ್ವತ್ತುಗಳು ಅಧಿಕ್ರಮಣದ ಅವಧಿಯಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪ ಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ್ರಮಣದ ಅವಧಿಯು ಮುಕ್ತಾಯವಾದ ತರುವಾಯ, ಕೇಂದ್ರ ಸರ್ಕಾರವು,–

(ಎ) ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಅವಧಿಯವರೆಗೆ ಅಧಿಕ್ರಮಣದ ಅವಧಿಯನ್ನು ವಿಸ್ತರಿಸಬಹುದು; ಅಥವಾ

(ಬಿ) ಪ್ರಕರಣ 3ರಲ್ಲಿ ಉಪಬಂಧಿಸಿದ ರೀತಿಯಲ್ಲಿ ಪರಿಷತ್ತನ್ನು ಪುನರ್‌ರಚಿಸಬಹುದು.

**22. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) ಸದಸ್ಯರು ತಮ್ಮ ಕರ್ತವ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಬಿ) ತಾಂತ್ರಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಪರಿವೀಕ್ಷಣೆ:

(ಸಿ) ಪರಿಷತ್ತು, ಆಯವ್ಯಯ ಪತ್ರ ಮತ್ತು ವರದಿಗಳನ್ನು ಯಾವ ನಮೂನೆ ಮತ್ತು ರೀತಿಯಲ್ಲಿ ಸಿದ್ಧಪಡಿಸಬೇಕಾಗಿದೆಯೋ ಆ ನಮೂನೆ ಮತ್ತು ರೀತಿ;

(ಡಿ) ಪರಿಷತ್ತಿನ ಲೆಕ್ಕಪತ್ರಗಳನ್ನು ಯಾವ ರೀತಿಯಲ್ಲಿ ಇಡಬೇಕಾಗಿದೆಯೋ ಆ ರೀತಿ; ಮತ್ತು

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**23. ವಿನಿಯಮಗಳ ರಚನಾಧಿಕಾರ.–** (1) ಪರಿಷತ್ತು, ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ವಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) ಪರಿಷತ್ತಿನ ಸಭೆಗಳನ್ನು ಮತ್ತು ಅಲ್ಲಿ ವ್ಯವಹಾರ ನಡೆಸುವ ಪ್ರಕ್ರಿಯೆಯನ್ನು ವಿನಿಯಮಿಸಬಹುದು;

(ಬಿ) ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) ಕಾರ್ಯನಿರ್ವಾಹಕ ಸಮಿತಿಯ ಸಭೆಗಳು ಮತ್ತು ಅಲ್ಲಿ ವ್ಯವಹಾರ ನಡೆಸುವ ಪ್ರಕ್ರಿಯೆಯನ್ನು ವಿನಿಯಮಿಸುವುದು;

(ಡಿ) ಅಧ್ಯಯನ ಮಂಡಲಿಯ ಸಂಬಂಧಿತ ಕ್ಷೇತ್ರ ರಚನೆ ಮತ್ತು ಅಧಿಕಾರ ಮತ್ತು ಪ್ರಕಾರ್ಯಗಳು;

(ಇ) ಯಾವ ಪ್ರದೇಶಕ್ಕಾಗಿ ಪ್ರಾದೇಶಿಕ ಸಮಿತಿಯನ್ನು ಸ್ಥಾಪಿಸಬೇಕಾಗಿದೆಯೋ ಆ ಪ್ರದೇಶ ಮತ್ತು ಅಂಥ ಸಮಿತಿಯ ರಚನೆ ಮತ್ತು ಪ್ರಕಾರ್ಯಗಳು.

**24. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮ ಮತ್ತು ವಿನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅನುಕ್ರಮವಾಗಿ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ

ವಿನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**25. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಕಂಡುಬರಬಹುದಾದಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

* * * * *